**ಕರ್ನಾಟಕ ಸರ್ಕಾರ**
**(ಮೀನುಗಾರಿಕೆ ಇಲಾಖೆ)**

**ಹೆಚ್.ಎಸ್.ವೀರಪ್ಪಗೌಡ**
**ಮೀನುಗಾರಿಕೆ ನಿರ್ದೇಶಕರು**

**ಮೀನುಗಾರಿಕೆ ನಿರ್ದೇಶನಾಲಯ,**
**3ನೇ ಮಹಡಿ, ಪೋಡಿಯಂ ಬ್ಲಾಕ್,**
**ವಿಶ್ವೇಶ್ವರಯ್ಯ ಕೇಂದ್ರ, ಡಾ:ಅಂಬೇಡ್ಕರ್ ವೀಧಿ,**
**ಬೆಂಗಳೂರು-1,**

**ಅ.ಸ.ಪತ್ರ ಸಂಖ್ಯೆ: ಪಂವಾಯೋ/155/2010-11** **ದಿ: 7-04-2011.**

**"ಅತ್ಯಂತ ಜರೂರು"**

ಶ್ರೀ

ವಿಷಯ: "ಸುವರ್ಣಭೂಮಿ" ಯೋಜನೆಯ ಅನುಷ್ಠಾನದ ಕುರಿತು.
ಉಲ್ಲೇಖ: ನಿರ್ದೇಶನಾಲಯದ ಪತ್ರ ಸಮ ಸಂಖ್ಯೆ: ದಿನಾಂಕ:19-03-2011 ಮತ್ತು 30-03-2011.

$$$$

ಕೃಷಿ ಮತ್ತು ಸಂಬಂಧಿತ ವಲಯಗಳಿಗೆ ಆದ್ಯತೆ ನೀಡಿ ರೈತ ಕುಟುಂಬಗಳ ಅಭಿವೃದ್ಧಿಗಾಗಿ "ಸುವರ್ಣಭೂಮಿ" ಎಂಬ ಯೋಜನೆಯನ್ನು 2011-12ನೇ ಸಾಲಿನಿಂದ ಅನುಷ್ಠಾನಗೊಳಿಸಲಾಗುತ್ತಿದೆ. ಈ ಕುರಿತು ಉಲ್ಲೇಖಿತ ದಿನಾಂಕ:19-03-2011 ರ ಪತ್ರದಲ್ಲಿ ಯೋಜನೆಯ ಮಾರ್ಗಸೂಚಿಯನ್ನು ಹಾಗೂ ದಿನಾಂಕ:30-03-2011 ರ ಪತ್ರದಲ್ಲಿ ಜಿಲ್ಲಾವಾರು ಆರ್ಥಿಕ ಮತ್ತು ಭೌತಿಕ ಗುರಿಗಳನ್ನು ಕಳುಹಿಸಿಕೊಡಲಾಗಿದೆ. ಸದರಿ ಯೋಜನೆಯಡಿ ಮೀನುಗಾರಿಕೆ ಇಲಾಖೆಯಿಂದ ಅನುಷ್ಠಾನಗೊಳಿಸಬೇಕಾದ ಕಾರ್ಯಕ್ರಮ ಹಾಗೂ ಷರತ್ತು ಮತ್ತು ನಿಬಂಧನೆಗಳು ಈ ಕೆಳಗಿನಂತಿವೆ.

2011-12 ನೇ ಸಾಲಿನಲ್ಲಿ ಕೃಷಿಕರು ಮೀನು ಕೃಷಿ ಕೈಗೊಳ್ಳಲು ಸರ್ಕಾರವು "ಮೀನುಗಾರಿಕೆ ಅಭಿವೃದ್ಧಿಗೆ ಹೊಸ ಕರ್ತೃತ್ವ ಶಕ್ತಿ" ಎಂಬ ಹೊಸ ಯೋಜನೆಯನ್ನು ಪ್ರಾರಂಭಿಸಲು 50,000 ಫಲಾನುಭವಿಗಳಿಗಾಗಿ ಆಯವ್ಯಯದಲ್ಲಿ ರೂ.50.00 ಕೋಟಿ ಅನುದಾನ ನೀಡಲಾಗಿದೆ. ಈ ಯೋಜನೆಯ ಮುಖ್ಯ ಉದ್ದೇಶ ಸಣ್ಣ ಮತ್ತು ಅತಿ ಸಣ್ಣ ರೈತರು ತಮ್ಮ ಸ್ವಂತ ಜಮೀನಿನಲ್ಲಿ ನೀರು ಸಂಗ್ರಹಣಾ ಕೊಳ ನಿರ್ಮಿಸಿ ಮೀನು ಕೃಷಿಯನ್ನು ಕೈಗೊಳ್ಳಲು ಪ್ರೋತ್ಸಾಹಿಸುವುದು.

ವ್ಯವಸಾಯದಲ್ಲಿ ತೊಡಗಿರುವ ಸಣ್ಣ ಹಾಗೂ ಅತಿ ಸಣ್ಣ ರೈತರು ತಮ್ಮ ಸ್ವಂತ ಜಮೀನಿನಲ್ಲಿ ಮೀನು ಕೃಷಿ ಕೊಳ ನಿರ್ಮಿಸಿಕೊಂಡು ಅಥವಾ ಇರುವ ನೀರು ಸಂಗ್ರಹಣಾ ಕೊಳವನ್ನು ಸೂಕ್ತವಾಗಿ ಮಾರ್ಪಡಿಸಿಕೊಂಡು ಮೀನು ಕೃಷಿ ಕೈಗೊಳ್ಳುವ ಜೊತೆಗೆ ನೀರು ಸಂಗ್ರಹಣಾ ಕೊಳಗಳಾಗಿ ಬಳಸಿಕೊಂಡಲ್ಲಿ ವ್ಯವಸಾಯಕ್ಕೆ ಅಗತ್ಯವೆನಿಸಿದಾಗ ನೀರೊದಗಿಸಿಕೊಳ್ಳಬಹುದಾಗಿದೆಯಲ್ಲದೆ ಬೆಳೆದ ಮೀನನ್ನು ತನ್ನ ಕುಟುಂಬದ ಆಹಾರಕ್ಕಾಗಿ ಬಳಸಿಕೊಳ್ಳಬಹುದಾಗಿದೆ ಅಥವಾ ಮಾರಾಟ ಮಾಡಿ ಆದಾಯ ಹೆಚ್ಚಿಸಿಕೊಳ್ಳಬಹುದಾಗಿದೆ.

ಈ ಯೋಜನೆಯಡಿ ಕೆಳಗೆ ವಿವರಿಸಿದ ಚಟುವಟಿಕೆಗಳನ್ನು ಕೈಗೊಳ್ಳಲು ಅವಕಾಶ ಕಲ್ಪಿಸಲಾಗಿದೆ:

1. 100 ಚದರ ಮೀಟರ್ ಹೊಸ ಮೀನು ಪಾಲನಾ ಕೊಳ/ ನೀರು ಸಂಗ್ರಹಣಾ ಕೊಳ ನಿರ್ಮಿಸಿ ಮೀನು ಕೃಷಿ ಕೈಗೊಳ್ಳುವುದು
2. ಈಗಾಗಲೇ ನೀರು ಸಂಗ್ರಹಣಾ ಕೊಳ ಹೊಂದಿದ್ದಲ್ಲಿ ಕನಿಷ್ಠ 150 ಚ.ಮೀ.ವರೆಗೆ ಅದರ ವಿಸ್ತರಣೆ / ನವೀಕರಣ ಕೈಗೊಳ್ಳುವುದು.

ಈ ಮೇಲಿನ ಯಾವುದೇ ಒಂದು ಚಟುವಟಿಕೆ ಕೈಗೊಳ್ಳಲು ಪ್ರತಿ ಕೃಷಿಕನಿಗೆ ಪ್ರೋತ್ಸಾಹಧನವಾಗಿ ರೂ.10,000/-ಗಳನ್ನು ಎರಡು ಕಂತುಗಳಲ್ಲಿ ತಲಾ ರೂ.5000/- ದಂತೆ ನೀಡಲಾಗುವುದು.

ಸಣ್ಣ ಮತ್ತು ಅತೀ ಸಣ್ಣ ಕೃಷಿಕರು ಒಣ ಭೂಮಿಯಲ್ಲಿ ಮೀನು ಕೃಷಿ ಕೈಗೊಳ್ಳಬೇಕಾಗಿರುವುದರಿಂದ ನೀರಿನ ಲಭ್ಯತೆ ಕಡಿಮೆ ಇರುವುದರಿಂದ ಕೊಳವೆ ಬಾವಿ ಮತ್ತು ಪಂಪ್ ಸೆಟ್ ಹೊಂದಿರುವ ರೈತರೂ ಮೀನು ಕೃಷಿ ಕೈಗೊಳ್ಳಬಹುದಾಗಿರುತ್ತದೆ.

ಯೋಜನೆಗೆ ಸಂಬಂಧಿಸಿದ ಷರತ್ತು ಮತ್ತು ನಿಬಂಧನೆಗಳು ಈ ಕೆಳಗಿನಂತಿವೆ :

1. ಈ ಯೋಜನೆಯ ಫಲಾನುಭವಿಯು ಸಣ್ಣ ಹಾಗೂ ಅತಿ ಸಣ್ಣ ಕೃಷಿಕನಾಗಿರಬೇಕು.
2. ಆಸಕ್ತಿಯುಳ್ಳ ಕೃಷಿಕರು ಈ ಯೋಜನೆಯ ಸೌಲಭ್ಯ ಪಡೆಯಲು ನಿಗದಿತ ಅರ್ಜಿಯನ್ನು ಅಗತ್ಯ ಮಾಹಿತಿಯೊಂದಿಗೆ ಆಯಾ ರೈತ ಸಂಪರ್ಕ ಕೇಂದ್ರಕ್ಕೆ (ಕೃಷಿ ಇಲಾಖೆ) ಸಲ್ಲಿಸುವುದು.
3. ಫಲಾನುಭವಿಗಳ ಆಯ್ಕೆಯನ್ನು ಆಯಾ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯ ಸಮಿತಿಯು ಮಾಡುವುದು.
4. 100 ಚ.ಮೀ. ಹೊಸ ಕೊಳ ನಿರ್ಮಿಸಬೇಕು ಅಥವಾ ಹಾಲಿ ಇರುವ ನೀರು ಸಂಗ್ರಹಣಾ ಕೊಳವನ್ನು ಕನಿಷ್ಠ 150 ಚ.ಮೀ ವರೆಗೆ ವಿಸ್ತರಿಸಿ ಮೀನು ಕೃಷಿ ಕೈಗೊಳ್ಳಬೇಕು.
5. ಕೊಳಗಳು ಕನಿಷ್ಠ 1.50 ಮೀಟರ್ ಆಳ ಹೊಂದಿದ್ದು ಕನಿಷ್ಠ 0.75 ಮೀಟರ್ ನೀರು ನಿರಂತರವಾಗಿ ನಿಲ್ಲುವಂತಿರಬೇಕು. ಉಳಿದ ನೀರನ್ನು ವ್ಯವಸಾಯಕ್ಕೆ ಬಳಸಿಕೊಳ್ಳಬಹುದು.
6. ಮೀನು ಕೃಷಿ ಕೊಳದಲ್ಲಿ ನೀರು ನಿಲ್ಲದಿದ್ದಲ್ಲಿ ಸದರಿ ಕೊಳಗಳಿಗೆ ಪ್ಲಾಸ್ಟಿಕ್ ಲೈನಿಂಗ್, ಕಲ್ಲು ಹಾಸುವಿಕೆ ಅಥವಾ ಇನ್ನಿತರ ಕ್ರಮಗಳನ್ನು ಕೈಗೊಳ್ಳಬಹುದಾಗಿದೆ.
7. ಪ್ರತಿ ಫಲಾನುಭವಿಗೆ ರೂ.10,000 ಮೊತ್ತದ ಧನಸಹಾಯವನ್ನು ಎರಡು ಕಂತುಗಳಲ್ಲಿ ಅಂದರೆ ಪ್ರಥಮ ಕಂತು ಫಲಾನುಭವಿ ಅನುಮೋದನೆಯಾದ ನಂತರ ಮತ್ತು ಎರಡನೇ ಅಂತಿಮ ಕಂತು ಕೊಳ ನಿರ್ಮಿಸಿ/ ವಿಸ್ತರಿಸಿದ ನಂತರ ಫಲಾನುಭವಿಯ ಬ್ಯಾಂಕು ಖಾತೆಗೆ ಚೆಕ್ ಮೂಲಕ ಜಮಾ ಮಾಡಲಾಗುವುದು.
8. ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯ ಸಮಿತಿಯಲ್ಲಿ ಆಯ್ಕೆಯಾದ ಫಲಾನುಭವಿಗಳಿಗೆ ಯೋಜನೆಯ ಧನಸಹಾಯವನ್ನು ಜಿಲ್ಲಾ ಮಟ್ಟದ ಮೀನುಗಾರಿಕೆ ಅಧಿಕಾರಿಯು ಪಾವತಿಸುವ ಅಧಿಕಾರವನ್ನು ಹೊಂದಿರುತ್ತಾರೆ.

ಸದರಿ ಯೋಜನೆಗೆ ಸಂಬಂಧಿಸಿದಂತೆ ಯೋಜನೆಯ ಮಾರ್ಗಸೂಚಿಗಳು, ಫಲಾನುಭವಿಗಳ ಗುರಿ, ಅಯ್ಕೆ, ಸಹಾಯಧನ ವಿತರಣೆ ಕುರಿತಂತೆ ತಮ್ಮ ವಲಯದಲ್ಲಿ ಬರುವ ಎಲ್ಲಾ ತಾಲ್ಲೂಕು ಮತ್ತು ಜಿಲ್ಲಾ ಮಟ್ಟದ ಅಧಿಕಾರಿಗಳ ಸಭೆ ಕರೆದು ವಿವರಿಸಿ ಹೆಚ್ಚಿನ ಪ್ರಚಾರ ನೀಡಿ ಯೋಜನೆಯನ್ನು ಯಶಸ್ವಿಯಾಗಿ ಹಾಗೂ ಕಾಲಮಿತಿಯಲ್ಲಿ ಅನುಷ್ಠಾನಗೊಳಿಸುವ ಕುರಿತು ಅಗತ್ಯ ಕ್ರಮ ಕೈಗೊಳ್ಳುವಂತೆ ಹಾಗೂ ಕೈಗೊಂಡ ಕ್ರಮದ ಕುರಿತು ಕೇಂದ್ರ ಕಛೇರಿಗೆ ಜರೂರಾಗಿ ವರದಿ ಸಲ್ಲಿಸುವಂತೆ ಕೋರಲಾಗಿದೆ.

ತಮ್ಮ ನಂಬುಗೆಯ

(ಹೆಚ್.ಎಸ್.ವೀರಪ್ಪಗೌಡ)

ಗೆ:

1. ಶ್ರೀ ಗೋಪಾಲರೆಡ್ಡಿ, ಮೀನುಗಾರಿಕೆ ಉಪ ನಿರ್ದೇಶಕರು, ಬೆಂಗಳೂರು
2. ಶ್ರೀ ಜಗದೀಶ್, ಮೀನುಗಾರಿಕೆ ಉಪ ನಿರ್ದೇಶಕರು, ಮೈಸೂರು
3. ಶ್ರೀ ಹೇಮಂತರಾಜು, ಮೀನುಗಾರಿಕೆ ಉಪ ನಿರ್ದೇಶಕರು, ಕಾರವಾರ.
4. ಶ್ರೀ ಸುರೇಶ್‌ಕುಮಾರ್, ಮೀನುಗಾರಿಕೆ ಉಪ ನಿರ್ದೇಶಕರು, ಮಂಗಳೂರು
5. ಶ್ರೀ ವೆಂಕಟೇಶಪ್ಪ, ಮೀನುಗಾರಿಕೆ ಉಪ ನಿರ್ದೇಶಕರು, ಶಿವಮೊಗ್ಗ
6. ಡಾ॥ ಎಂ.ಜಿ.ಜಯರಾಂ, ಮೀನುಗಾರಿಕೆ ಉಪ ನಿರ್ದೇಶಕರು, ಬೆಳಗಾವಿ.
7. ಶ್ರೀ ರಾಮಮೋಹನ್ ರೆಡ್ಡಿ, ಮೀನುಗಾರಿಕೆ ಉಪ ನಿರ್ದೇಶಕರು, ಬಳ್ಳಾರಿ (ಪ್ರಭಾರ)